**ಒಎಸ್ ಸಂ.ಃ 21/2018**
**ಪಿಡಬ್ಲ್ಯೂ ಃ 1 (ಶ್ರೀನಿವಾಸರೆಡ್ಡಿ)**
**ದಿನಾಂಕ 03-01-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಶ್ರೀ ಎ.ಎಲ್.ಎನ್ ವಕೀಲರಿಂದ**

ಒಎಸ್ ನಂ.783/1995 ನ್ನು ಪ್ರತಿವಾದಿಯರ ಮೇಲೆ ಸಲ್ಲಿಸಿರುತ್ತೇನೆ. ಆ ದಾವೆಯನ್ನು ಸರ್ವೆ ನಂ.44 ರ ಮೇಲೆ ಸಲ್ಲಿಸಿರುತ್ತೇನೆ. ಆ ಆಸ್ತಿಯನ್ನು ಸರ್ಕಾರದಿಂದ ಮಂಜೂರು ಮಾಡಿರುತ್ತಾರೆ. ಸರ್ವೆ ನಂ.44 ಕ್ಕೆ ಸಂಬಂಧಿಸಿದಂತಹ ದಾಖಲೆಗಳನ್ನು ನಾನು ಸೃಷ್ಠಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.44 ಮತ್ತು ಇತರೆ ಜಮೀನುಗಳು ವಿಶೇಷ ಜಿಲ್ಲಾಧಿಕಾರಿಯವರ ಪ್ರಕರಣ ಸಂಖ್ಯೆ 3180/1961-62 ರಂತೆ ಜೋಡಿದಾರರಿಗೆ ಮಂಜೂರಾಗಿದೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಂಜೂರಾದ ದಿನಾಂಕದಿಂದ ದಿನಾಂಕ 04.11.1992ರವರೆಗೂ ಜೋಡಿದಾರರೇ ದಾವಾ ಆಸ್ತಿಯ ಮಾಲೀಕರಾಗಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಜೋಡಿದಾರರು ಆಸ್ತಿಯನ್ನು ಮಾರಾಟ ಮಾಡಬೇಕೆಂದು ಪ್ರತಿವಾದಿಯರ ಬಳಿ ಕೇಳಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ಪ್ರತಿವಾದಿಯರು ಒಪ್ಪಿಕೊಂಡಿದ್ದು ಅದರಂತೆ ದಿನಾಂಕ 04.11.1992 ರಂದು ಜೋಡಿದಾರರು ದಾವಾ ಸರ್ವೆ ನಂಬರ್‌ನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿ ಕ್ರಯದ ಕರಾರು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅಂದಿನಿಂದ ದಾವಾ ಸರ್ವೆ ನಂಬರ್‌ನಲ್ಲಿ ಪ್ರತಿವಾದಿಯರು ಗಂಡ ಹೆಂಡತಿ ಆಗಿದ್ದರಿಂದ ನೀರು ಸಿಗುವವರೆಗೆ ಹಿಪ್ಪುನೇರಳೆ ಗಿಡಗಳನ್ನು ಬೆಳೆಸುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್‌ನ ಜಮೀನಿನ ಪೂರ್ವಕ್ಕೆ ಪ್ರತಿವಾದಿಯರಿಗೆ ಸೇರಿದ ಆಸ್ತಿ ಸರ್ವೆ ನಂ.28 ಇದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.28 ರಲ್ಲಿ ಬಾವಿ ಕೂಡ ಇತ್ತು ಎಂದರೆ ಸರಿಯಲ್ಲ. ಸದರಿ ಬಾವಿಯಿಂದ ಪ್ರತಿವಾದಿಯರು ನೀರು ತೆಗೆದು ದಾವಾ ಸರ್ವೆ ನಂಬರ್‌ನಲ್ಲಿ ಬೆಳೆ ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸರ್ವೆ ನಂಬರ್ ಮತ್ತು ಬಾವಿ ಇರುವುದಿಲ್ಲ ಎಂದು ಹೇಳುತ್ತಾರೆ. ನಾನು ಸಲ್ಲಿಸಿದಂತಹ ದಾವೆ ನಂ.783/1995 ರಲ್ಲಿ ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನನಗೆ ಆಸ್ತಿ ಮಂಜೂರಾದ ಆದೇಶದ ವಿರುದ್ಧ ಜೋಡಿದಾರರು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಆ ಪ್ರಕರಣವು ಪುನಃ ತಹಶೀಲ್ದಾರ್‌ರವರಿಗೆ ಮರುಪರಿಶೀಲನೆ ಮಾಡಬೇಕೆಂದು

ಹಿಂದೆ ಕಳುಹಿಸಿ ಕೊಟ್ಟಿರುತ್ತಾರೆ. ತಹಶೀಲ್ದಾರ್‌ರವರು ಪರಿಶೀಲಿಸಿ ಅದು ಸರ್ಕಾರಿ ಜಮೀನು ಎಂದು ತೀರ್ಮಾನಿಸಿರುತ್ತಾರೆ. ಎ.ಸಿ ನ್ಯಾಯಾಲಯ ಮತ್ತು ಡಿ.ಸಿ ನ್ಯಾಯಾಲಯದ ಆದೇಶದ ಪ್ರತಿಯನ್ನು ಮತ್ತು ತಹಶೀಲ್ದಾರ್‌ರವರ ಮರುಪರಿಶೀಲನಾ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲನೆ ಮಾಡಿ ನಾನು ಸ್ವಾದೀನದಲ್ಲಿ ಇಲ್ಲದೇ ಇದ್ದರಿಂದ ಖಾತೆ ಬದಲಾವಣೆ ಮಾಡಲು ರಹಾ ಇಲ್ಲ ಎಂದು ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರುವುದಿಲ್ಲ ನನಗೆ ನೋಟೀಸು ಕೊಟ್ಟಿರುವುದಿಲ್ಲ ಹಾಗೂ ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.44 1 ಎಕರೆ 29 ಗುಂಟೆ ಇದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ ಹಿಡುವಳಿ ಜಮೀನು ಎಂದು ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ಅದು ಗೋಮಾಳ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಗೋಮಾಳ ಜಮೀನು ಎಂದು ಹೇಳುತ್ತಾರೆ. ರಾಮಚಂದ್ರರೆಡ್ಡಿ ಎನ್ನುವವರು ಕೋಲಾರದ ತಹಶೀಲ್ದಾರರಾಗಿದ್ದರು ಎಂದರೆ ಸರಿಯಲ್ಲ. ಅವರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ರಾಮಚಂದ್ರ ರೆಡ್ಡಿ ಎನ್ನುವವರು ತಹಶೀಲ್ದಾರ್ ಆಗಿದ್ದರು ಎಂದರೆ ಸರಿ ಅವರು ಕೆಲವು ದಿನಗಳ ಮಟ್ಟಿಗೆ ಅಸಿಸ್ಟೆಂಟ್ ಕಮೀಷನರ್ ಆಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ರಾಮಚಂದ್ರರೆಡ್ಡಿಯವರ ಅಕ್ಕ ನನಗೆ ಚಿಕ್ಕಮ್ಮನಾಗಬೇಕು ಎಂದರೆ ಸರಿಯಲ್ಲ. ರಾಮಚಂದ್ರರೆಡ್ಡಿಯವರು ನನಗೆ ಸಂಬಂಧಿಕರಾಗಿದ್ದು ಅವರು ಮತ್ತು ಕಂದಾಯ ನಿರೀಕ್ಷಕರೊಂದಿಗೆ ಸೇರಿಕೊಂಡು ನಾನು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮುನಿಯಮ್ಮ ಮತ್ತು ನನ್ನ ಮಧ್ಯೆ ಕೆಜಿಎಫ್ ನ್ಯಾಯಾಲಯದಲ್ಲಿ ದಾವೆ ನಡೆದಿತ್ತು ಎಂದರೆ ಸರಿ. ಸದರಿ ಮುನಿಯಮ್ಮ ಕುರುಬ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ಅವರು ಸಂಬಂಧದಲ್ಲಿ 1ನೇ ಪ್ರತಿವಾದಿಯ ತಂಗಿಯಾಗಬೇಕು ಎಂದರೆ ನನಗೆ ಗೊತ್ತಿರುವುದಿಲ್ಲ. 1ನೇ ಪ್ರತಿವಾದಿಯವರು ಆ ಪ್ರಕರಣದಲ್ಲಿ ಮುನಿಯಮ್ಮನಿಗೆ ಸಹಾಯ ಮಾಡಿದ್ದರು ಎಂದರೆ ಸರಿಯಲ್ಲ. ಆ ದಾವೆಯಲ್ಲಿ 1ನೇ ಪ್ರತಿವಾದಿಯು ಮುನಿಯಮ್ಮನಿಗೆ ಸಹಾಯ ಮಾಡಿದ್ದರು ಎಂದು ನಾನು 1ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಒಎಸ್ ನಂ.783/1995 ನ್ನು ನಾನು ಕೇವಲ 1ನೇ ಪ್ರತಿವಾದಿಯ ವಿರುದ್ದ ಮಾತ್ರ ಸಲ್ಲಿಸಿದ್ದು 2ನೇ

ಪ್ರತಿವಾದಿಯ ವಿರುದ್ದ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ವೆಂಕಟೇಶರವರು ದಿನಾಂಕ 04.11.1992 ರಲ್ಲಿ ತನ್ನ ಹೆಂಡತಿ ಅಂದರೆ ಈ ಕೇಸಿನ 2ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯದ ಕರಾರು ಪತ್ರ ಆಗಿದೆ ಎಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಕ್ರಯದ ಕರಾರು ಆಗಿರುವ ವಿಚಾರ ಒಎಸ್ ನಂ.783/1995 ರ ವಿಚಾರಣೆಯ ಸಮಯದಲ್ಲಿ ಗೊತ್ತಾಗಿರುತ್ತದೆ. ಆ ಪ್ರತಿವಾದ ಪತ್ರದಲ್ಲಿ ಕ್ರಯದ ಕರಾರಿನಡಿಯಲ್ಲಿ ಸ್ವಾದೀನ ಕೊಟ್ಟಿದ್ದಾರೆಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುತ್ತದೆ ಆದರೆ ಅದಕ್ಕೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಹೇಳುತ್ತಾರೆ.

ನನಗೆ ಕ್ರಯದ ಕರಾರು ಬರೆದುಕೊಟ್ಟಿರುವ ವಿಚಾರ ಗೊತ್ತಾದಾಗಿನಿಂದ ಈ ಕೇಸು ಹಾಕುವವರೆಗೆ ನಾನು ನಾರಾಯಣಮ್ಮರವರ ವಿರುದ್ದ ಕ್ರಯದ ಕರಾರು ಸುಳ್ಳು ಎಂದು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಒಎಸ್ ನಂ.783/1995 ವಿಚಾರಣಾ ನ್ಯಾಯಾಲಯದಲ್ಲಿ ಡಿಕ್ರಿಯಾಯಿತು ಎಂದರೆ ಸರಿ. ಆ ತೀರ್ಪಿನ ವಿರುದ್ದ ಪ್ರತಿವಾದಿಯರು ಆರ್‌ಎ ನಂ.105/2002 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಆ ಮೇಲ್ಮನವಿಯಲ್ಲಿ ಕೆಲವು ದಾಖಲೆಗಳನ್ನು ವೆಂಕಟೇಶಪ್ಪ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮೇಲ್ಮನವಿ ವಜಾ ಆಯಿತು ಎಂದರೆ ಸರಿ. ಅದರ ವಿರುದ್ದ ವೆಂಕಟೇಶಪ್ಪರವರು ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ 2ನೇ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಆ ಮೇಲ್ಮನವಿಯನ್ನು ಪುರಸ್ಕರಿಸಿ ವಿಚಾರಣಾ ನ್ಯಾಯಾಲಯಕ್ಕೆ ಪುನರ್ ವಿಚಾರಣೆ ಮಾಡಲು ಗೌರವಾನ್ವಿತ ಉಚ್ಚನ್ಯಾಯಾಲಯವು ಕಡತವನ್ನು ಕಡತವನ್ನು 1ನೇ ಮೇಲ್ಮನವಿ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟರು ಎಂದರೆ ಸಾಕ್ಷಿಯು ಪ್ರತಿವಾದಿಗೆ ಅನುಕೂಲವಾಗಿಲ್ಲ ಆದರೆ ಪುನರ್ ವಿಚಾರಣೆ ಮಾಡಲು ಕಳುಹಿಸಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ.

ಪುನಃ ಮೇಲ್ಮನವಿ ನಂ.105/2002 ರಲ್ಲಿ ಮೇಲ್ಮನವಿ ನ್ಯಾಯಾಲಯವು ಮೇಲ್ಮನವಿಯನ್ನು ಪುರಸ್ಕರಿಸಿ ವಿಚಾರಣಾ ನ್ಯಾಯಾಲಯಕ್ಕೆ ಪುನರ್ ವಿಚಾರಣೆ ಮಾಡಲು ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ. ನಂತರ ವಿಚಾರಣಾ ನ್ಯಾಯಾಲಯವು ಪುನರ್ ವಿಚಾರಣೆ ಮಾಡಿ ನನ್ನ ದಾವೆಯನ್ನು ವಜಾಗೊಳಿಸಿತು ಎಂದರೆ ಸರಿ. ಆ ತೀರ್ಪಿನ ವಿರುದ್ದ ಆರ್.ಎ ನಂ.128/2013 ಎಂದು ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿ. ಆ ಮೇಲ್ಮನವಿ ನ್ಯಾಯಾಲಯವು ವಿಚಾರಣಾ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿದೆ ಎಂದರೆ ಸರಿ. ಆ ರೀತಿ ಆಗಿದ್ದರೂ ಕೂಡ

ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರು ನ್ಯಾಯಾಲಯಕ್ಕೆ ಅಲೆಯಲ್ಲಿ ಎಂದು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸರ್ವೆ ನಂಬರ್ ಯಾವತ್ತೂ ಮಂಜೂರು ಆಗಿಲ್ಲ ನಾನು ಯಾವತ್ತೂ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಿ ಪಿ 5 ಒಸ್ ನಂ.469/2008 ದಾವೆಯನ್ನು ಜೋಡಿದಾರರು ನನ್ನ ಮೇಲೆ ಹಾಕಿದ ದಾಖಲೆಯಾಗಿರುತ್ತದೆ. ಯಾವ ಕಾರಣದಿಂದ ವಜಾ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಆ ದಾವೆಯಲ್ಲಿ ಪ್ರತಿವಾದಿಯರು ಪಕ್ಷಕಾರರಾಗಿರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.